

ಸುಖ ಸ್ವಪ್ನದಲ್ಲಿ ಕಳೆದುಹೋಗಿದ್ದ ವೇಣುಗೋಪಾಲನಿಗೆ ಎಚ್ಚರಾಗುವಾಗ ಹೊರಗೆ ಜೋರು ಮಳೆ ಹಿಡಿದಿತ್ತು. ಗಾಢಾಂಧಕಾರದಲ್ಲಿ, ಗವ್ವ್ ಎನ್ನುವ ಇರುಳ ಮೌನದಲ್ಲಿ ಮಳೆ ಮಾತ್ರ ಕೂಗುತ್ತಿತ್ತು. ಕನಸಿನ ಲೋಕದಿಂದ ಎಚ್ಚರಾಗಿದ್ದ ವೇಣುಗೋಪಾಲನ ಮೊಗದಲ್ಲಿ ಅರಳಿದ ಮಲ್ಲಿಗೆಯಂತಹ ಘಮವಿತ್ತು. ನಕ್ಷತ್ರದ ಹೊಳಪಿತ್ತು. ಅವನ ಮೈಯಿಡಿ ಅದ್ಯಾವುದೋ ಮಾಯಕದ ಲೋಕದ ಸುಖದಲ್ಲಿ ಮಿಂದೆದ್ದ ಸಂತೃಪ್ತಿಯಲ್ಲಿ ತೊಯ್ದಿತ್ತು. ತಾನು ಕಂಡಿದ್ದ ಸುಖಸ್ವಪ್ನವೊಂದರ ಗುಂಗು ವೇಣುಗೋಪಾಲನಿಗೆ ಇನ್ನೂ ಬಿಟ್ಟಿರಲಿಲ್ಲ. ತಾನು ಕಂಡಿದ್ದು ಕನಸೆಂದು ಗೊತ್ತಿದ್ದರೂ, ಕನಸಿನ ಆಸ್ವಾದನೆಯಲ್ಲಾದರೂ ಕೊಂಚ ಹೊತ್ತು ವಾಸ್ತವವನ್ನು ಕಳೆಯೋಣ. ಬೆಳಗಾದರೆ ಕನಸೆಲ್ಲಾ ಮರೆತು ಹೋದರೆ ಥ್ರಿಲ್ ಇರುವುದಿಲ್ಲ. ಬಿಸಿಯಾಗಿದ್ದಾಗಲೇ ಅನುಭವಿಸಬೇಕು ಎಂದುಕೊಂಡು ವೇಣುಗೋಪಾಲ ನಿದ್ದೆಯಿಂದ ಪೂರ್ತಿ ಎದ್ದು ತನ್ನ ಪಕ್ಕದಲ್ಲಿ ಮಲಗಿದ್ದ ಹೆಂಡತಿ ಗಂಗೋತ್ರಿಯನ್ನೊಮ್ಮೆ ನೋಡಿದ. ಗಂಗೋತ್ರಿ ಬೆಕ್ಕಿನಂತೆ ಮಲಗಿದ್ದಳು. ಅವಳ ಸುಖ ನಿದ್ರೆಯನ್ನು ಭಂಗಗೊಳಿಸಲು ಇಷ್ಟವಿಲ್ಲದೇ ಅವಳಿಗೆ ಚೂರು ಎಚ್ಚರಾಗದಂತೆ ಹಗುರನೇ ಜಗುಲಿಯ ಕಿಟಕಿಯತ್ತ ನಿಂತು ತನ್ನ ಕನಸಿನ ಕನವರಿಕೆಯಲ್ಲಿ, ಹೊರಗೆ ಜೋರಾಗಿ ಬೀಳುತ್ತಿರುವ ಮಳೆಯನ್ನೂ, ಆ ಮಳೆಯಲ್ಲಿಯೇ ಮಿಣಿ ಮಿಣಿ ಎನ್ನುತ್ತಾ ಹೊಳೆಯುತ್ತಿರುವ ಮಿಂಚು ಹುಳಗಳನ್ನು ನೋಡುತ್ತಲೇ ತಾನು ಕಂಡಿದ್ದ ಕನಸನ್ನು, ಈಗ ಮತ್ತೆ ಮತ್ತೆ ಸುಖಿಸಲು ನೋಡಿದ. ಅವನ ಕನಸಿಗಿವತ್ತು ಪ್ರಿಯಕಾರಿಣಿ ಬಂದಿದ್ದಳು. ಬರೀ ಬಂದಿರಲಿಲ್ಲ. ಕನಸಲ್ಲಿ ಪೂರ್ತಿ ಅವನನ್ನೇ ಆವರಿಸಿದ್ದಳು. ಅವನ ಕೆನ್ನೆಗೊಂದು ಮುತ್ತನ್ನೂ ಕೊಟ್ಟಿದ್ದಳು. ಕುದುರೆಮುಖದ ರಸ್ತೆಯ ಮರದ ನೆರಳೊಂದರ ಕೆಳಗೆ ವೇಣುಗೋಪಾಲನೂ ಅವನ ಎದೆಗೊರಗಿ ಪ್ರಿಯಕಾರಿಣಿಯೂ ಕುಳಿತಿದ್ದಳು. ನೋಡು ಅಲ್ಲಿ ದೂರದಲ್ಲಿ ಕಾಣುತ್ತಿರುವ ಆ ಬೆಟ್ಟದ ಹಸುರಿನಂತೆ ನಾವು ಬಾಳಿ ಬೆಳಗಬೇಕು, ಅಲ್ಲೇ ಕಾಣ್ತಿದೆಯಲ್ಲಾ ಆ ಮನಮೋಹಕ ಜಲಪಾತ, ಅದರಂತೆ ಉಲ್ಲಾಸವಿಡೀ ನನ್ನ ಬದುಕಲ್ಲಿ ಹರಿಯುತ್ತಿರಬೇಕು ಎಂದವನು ಹೇಳುವಾಗ ಅವಳು ನಗುತ್ತ 'ನನ್ನ ಬಾಳು ನಿಮಗಾಗಿ' ಎನ್ನುತ್ತಾ ಅವನಿಗೆ ಮುತ್ತು ಕೊಟ್ಟಿದ್ದಳು. ಅವನೂ ಕೊಟ್ಟ.

ದೂರದಲ್ಲಿ ಬೆಟ್ಟಗಳಿಗೆ ಇನ್ನೇನು ಮುತ್ತಿಕೊಂಡು ಬಿಡಲು ಓಡೋಡಿ ಬರುತ್ತಿದ್ದ ಮಂಜಿನ ಹಾಗೆ ಇವರಿಬ್ಬರೂ ಒಲವಿನ ಬಾಹುಬಂಧನದಲ್ಲಿ ಕಳೆದೇ ಹೋಗಿದ್ದರು. ಅವಳ ಮೈಬಿಸಿ ಅವನ ಆಸೆಗಳಿಗೆ ಕಾವು ಕೊಟ್ಟಿತ್ತು. ಕಾಡಿನ ಮಡಿಲಿನಲ್ಲಿ ಮಳೆ ಮಂಜು ಸುಖಿಸುವಂತೆಯೇ ಇವರಿಬ್ಬರೂ ಸುಖದಲ್ಲೇ ಪವಡಿಸುತ್ತಿರುವಾಗ ವೇಣುಗೋಪಾಲನಿಗೆ ಎಚ್ಚರಾಗಿತ್ತು. ಆ ರೋಮಾಂಚಕ ಕನಸು ಇನ್ನೂ ಬೇಕು ಇನ್ನೂ ಬೇಕು ಎನ್ನುವಾಗಲೇ ನಿಂತುಬಿಟ್ಟಿತ್ತು. ಪ್ರಿಯಕಾರಿಣಿಯ ಒಲವಿನ ಬಿಗಿಯಪ್ಪುಗೆಯ ಕನಸನ್ನು ಸುಖಿಸಿದ್ದ ವೇಣುಗೋಪಾಲನಿಗೆ, ಆ ಕನಸು ಅದೆಷ್ಟು ಗಾಢವಾಗಿ ನಾಟಿತೆಂದರೆ, ಅವನು ಅದೊಂದು ಕನಸು ಎಂದು ಅದರಿಂದ ಹೊರಗೆ ಬರಲು ಸುತರಾಂ ಮನಸ್ಸು ಮಾಡಲಿಲ್ಲ. ಈಗ ಹೊರಗಿನ ಮಳೆಯನ್ನು ಮತ್ತೂ ಮತ್ತೂ ನೋಡುತ್ತಿರುವ ಈ ಹೊತ್ತಿಗೂ ಅವನು ಕಂಡ ಕನಸು ಅವನೊಳಗೆ ಇನ್ನೊಂದಷ್ಟು ವಿಸ್ತೃತವಾಗುತ್ತಲೇ ಹೋಗುತ್ತಿತ್ತು.